PW-2
CW-2

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

SPL.Case(NDPS) 10/2021

| | | |
|---|---|---|
| ಸಾಕ್ಷಿದಾರರ ಹೆಸರು | : | ವಿಶ್ವನಾಥ ಪಿ ವಿ |
| ತಂದೆಯ/ಗಂಡನ ಹೆಸರು | : | ವೀರಪ್ಪ ಪಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಗ್ರಾಮ ಆಡಳಿತಾಧಿಕಾರಿ, ಜೋಗ ವೃತ್ತ, ನ್ಯಾಮತಿ ತಾಲ್ಲೂಕು |
| ವಾಸ ಸ್ಥಳ | : | ಹರಿಹರ. |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 2

ದಿ: 18-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. 2011 ರಿಂದ ಇಲ್ಲಿಯವರೆಗೂ ನಾನು ಜೋಗ ವೃತ್ತ, ನ್ಯಾಮತಿ ತಾಲ್ಲೂಕು ನಲ್ಲಿ ಗ್ರಾಮಾಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-3 ರವರು ಚಿನ್ನಿಕಟ್ಟೆ ವೃತ್ತದಲ್ಲಿ ಗ್ರಾಮಾಡಳಿತಾಧಿಕಾರಿಯಾಟ ಕಾರ್ಯ ನಿರ್ವಹಿಸುತ್ತಿದ್ದರು. ಚಾಸಾ-4 ರವರು ನ್ಯಾಮತಿ ತಹಶೀಲ್ದಾರ್ ಆಗಿದ್ದರು. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿನಾಂಕಃ 27-07-2021 ರಂದು ತಹಶೀಲ್ದಾರ್ ರವರು ನನಗೆ ಮತ್ತು ಚಾಸಾ-3 ರವರಿಗೆ ಮೌಖಿಕವಾಗಿ ಹೊಸ ಜೋಗ ಗ್ರಾಮದ ಬಸ್ ನಿಲ್ದಾಣದಲ್ಲಿ ಗರಗೇಶ್ ನಾಯ್ಕು ಮತ್ತು ಇತರರು ಅಕ್ರಮವಾಗಿ ಗಾಂಜಾ ಮಾರುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ, ಪಂಚರಾಗಿ ಸಹಕರಿಸಲು ನಮಗೆ ನೋಟೀಸನ್ನು ಜಾರಿ ಮಾಡಿದರು. ನಾನು, ಚಾಸಾ-3 ಮತ್ತು 4 ರವರು ನ್ಯಾಮತಿ

PW-2
CW-2

ಪೋಲೀಸ್ ಠಾಣೆ ಗೆ ಹೋದೆವು. ಆಗ ಮದ್ಯಾಹ್ನ 01-30 ಗಂಟೆ ಆಗಿತ್ತು. ನ್ಯಾಮತಿ ಪೋಲೀಸ್ ಠಾಣೆ ಯಲ್ಲಿ ಚಾಸಾ-1 ಮತುತ ಸಿಬ್ಬಂದಿಗಳು ಇದ್ದರು. ಅಲ್ಲಿ ಚಾಸಾ-1 ರವರು 1 ನೇ ಆರೋಪಿ ಅಕ್ರಮವಾಗಿ ಮಾರುತ್ತಿರುವುದಾಗಿ ನಮಗೆ ಪಂಚರಾಗಿ ಸಹಕರಿಸಲು ನೋಟೀಸು ಜಾರಿ ಮಾಡಿದರು. ಆ ನೋಟೀಸನ್ನು ಈಗ ನಾನು ನೋಡುತ್ತಿದ್ದು ಅದನ್ನು ನಿ.ಪಿ.- 13 ಎಂದು, ನನ್ನ ಸಹಿಯನ್ನು ನಿ.ಪಿ.- 13(ಎ) ಎಂದು ಗುರುತಿಸಲಾಯಿತು.

2. ನಂತರ ನಾನು ಮತ್ತು ಚಾಸಾ3 ಮತ್ತು ಚಾಸಾ-4 ರವರು ತಹಶೀಲ್ದಾರ್ ಜೀಪಿನಲ್ಲಿ ಜೋಗ ಗ್ರಾಮದ ಬಸ್ ನಿಲ್ದಾಣಕ್ಕೆ ಹೋದೆವು, ಚಾಸಾ-1 ಮತ್ತು ಅವರ ಸಿಬ್ಬಂದಿಯವರು ಪೋಲೀಸ್ ಜೀಪಿನಲ್ಲಿ ಬಂದರು. ಅವರು ಲ್ಯಾಪ್ ಟಾಪ್, ಪ್ರಿಂಟರ್, ತೂಕದ ಯಂತ್ರ, ಅರಗು ಸೀಲು, ಇತರೆ ದಾಖಲೆಗಳನ್ನು ತಮ್ಮೊಂದಿಗೆ ತಂದರೆ ಠಾಣೆಯಿಂದ ಹೊರಟಾಗ ಮದ್ಯಾಹ್ನ 01-30 ಗಂಟೆ ಆಗಿತ್ತು. ಸ್ಥಳಕ್ಕೆ ನಾವು ಮದ್ಯಾಹ್ನ 02-00 ಗಂಟೆಗೆ ತಲುಪಿದೆವು. ಹೊಸಜೋಗ ಬಸ್ ನಿಲ್ದಾಣಕ್ಕೆ ಹೋದಾಗ ಅಲ್ಲಿ 4 ಜನ ಆರೋಪಿತರು ಕುಳಿತ್ತಿದ್ದರು, ಅವರು ನಮ್ಮನ್ನು ನೋಡಿ ಓಡಲು ಪ್ರಯತ್ನಿಸಿದರು. ಅವರನ್ನು ಪೋಲೀಸ್ ಸಿಬ್ಬಂದಿಗಳು 3 ಜನರನ್ನು ಹಿಡಿದರು, ಒಬ್ಬ ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ. ಆ ಮೂರು ಜನರನ್ನು ಚಾಸಾ-1 ರವರು ವಿಚಾರಣೆ ಮಾಡಿದಾಗ ಮೊದಲನೆಯ ವ್ಯಕ್ತಿ ಧರಗೇಶ್ ನಾಯ್ಕ, 2 ನೇ ವ್ಯಕ್ತಿ ಲೋಹಿತ್ ನಾಯ್ಕ, 3 ನೇ ವ್ಯಕ್ತಿ ನಾಗರಾಜ ಅಲಿಯಾಸ್ ರೋಶನ್ ಹಾಗೂ ಓಡಿ ಹೋದ ವ್ಯಕ್ತಿ ದರ್ಶನ್ ಎಂಬುದಾಗಿ ತಿಳಿಸಿದರು. ಸದರಿ ಆರೋಪಿತರನ್ನು ನ್ಯಾಯಾದೀಶರ ಮುಂದೆ ಹಾಜರುಪಡಿಸಬೇಕೋ, ಪತ್ರಾಂಕಿತ ಅಧಿಕಾರಿಯವರ ಮುಂದೆ ತಪಾಸಣೆ ಮಾಡಬೇಕೋ ಎಂದಾಗ ಅವರು ಪತ್ರಾಂಕಿತ ಅಧಿಕಾರಿರವರ ಮುಂದೆ ತಪಾಸಣೆ ಮಾಡಬೇಕೆಂದು ಹೇಳಿದರು. ಆ ಪ್ರಕಾರ ನಾವೆಲ್ಲರೂ ಪರಸ್ಪರ ಅಂಗ ಶೋಧನೆ ಮಾಡಿಕೊಂಡು, ನಮ್ಮ ಬಳಿ ಯಾವುದೇ ಗಾಂಜಾ ವಸ್ತುಗಳು ಇಲ್ಲ ಅಂತ

PW-2
CW-2

ಖಚಿತಪಡಿಸಿಕೊಂಡೆವು. ನಂತರ 1 ನೇ ಆರೋಪಿಯನ್ನು ಚಾಸಾ- 1 ರವರು ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಒಂದು ಸಣ್ಣ ಕವರ್ ಇತ್ತು, ಅದರಲ್ಲಿ ಗಾಂಜಾ ಇತ್ತು. 2 ನೇ ಆರೋಪಿಯ ಅಂಗ ಶೋಧನೆ ಮಾಡಿದಾಗ ಆತನ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಒಂದು ಸಣ್ಣ ಕವರ್ ಇತ್ತು ಅದರಲ್ಲಿ ಗಾಂಜಾ ಇತ್ತು ಮತ್ತು 3 ನೇ ಆರೋಪಿಯ ಪ್ಯಾಂಟ್ ಎಡಭಾಗದ ಜೇಬಿನಲ್ಲಿ ಒಂದು ಸಣ್ಣ ಕವರ್ ಇತ್ತು, ಅದರಲ್ಲಿ ಗಾಂಜಾ ಇತ್ತು. ಅದನ್ನು ಗಮನಿಸಿದಾಗ ಕೆಟ್ಟ ವಾಸನೆ ಬರುತ್ತಿತ್ತು. ಆದ್ದರಿಂದ ಅದು ಗಾಂಜಾ ಅಂತ ಕಂಡು ಬಂದಿತ್ತು. ನಂತರ ಚಾಸಾ-1 ಮತ್ತು ನಮ್ಮೆಲ್ಲರ ಸಮಕ್ಷಮ ತೂಕ ಮಾಡಲಾಯಿತು. 1 ನೇ ಆರೋಪಿಯ ಬಳಿ ಸಿಕ್ಕ ಗಾಂಜಾ 16 ಗ್ರಾಂ ಗಾಂಜಾ ಇತ್ತು. 2 ನೇ ಆರೋಪಿಯ ಬಳಿ ಸಿಕ್ಕ ಗಾಂಜಾ 13 ಗ್ರಾಂ ಗಾಂಜಾ ಇತ್ತು. 3 ನೇ ಆರೋಪಿಯ ಬಳಿ ಸಿಕ್ಕ ಗಾಂಜಾ 14 ಗ್ರಾಂ ಗಾಂಜಾ ಇತ್ತು. ಎಲ್ಲಾ ಒಟ್ಟು 43 ಗ್ರಾಂ ಗಾಂಜಾ ಇತ್ತು. ಇದನ್ನೆಲ್ಲಾ ಪರೀಕ್ಷಿಸಿ ಸ್ಥಳದಲ್ಲೇ ಬಿಳಿ ಬಟ್ಟೆಯಿಂದ ಕವರ್ ಮಾಡಿ ಅರಗಿನಿಂದ ಸೀಲು ಮಾಡಲಾಯಿತು. ನಂತರ ಚಾಸಾ-1 ರವರು ಸದರಿ ಗಾಂಜಾ ಎಲ್ಲಿಂದ ತರಲಾಗಿದೆ ಎಂದು ಕೇಳಿದಾಗ ಅವರು ಹೊಸ ಜೋಗ ಗ್ರಾಮದ ಕೃಷ್ಣ ನಾಯ್ಕರವರ ಮನೆ ಹಿಂದೆ ಇರುವುದಾಗಿ ತಿಳಿಸಿದರು. ನಂತರ 1 ನೇ ಆರೋಪಿಯು ಕೃಷ್ಣ ನಾಯ್ಕರವರ ಮನೆಯ ಹಿಂದೆ ಗಾಂಜಾ ಬೆಳೆದಿರುವುದಾಗಿ, ಸದರಿ ಮನೆಯನ್ನು ತೋರಿಸುವುದಾಗಿ ತಿಳಿಸಿದರು. ನಂತರ ಸ್ಥಳದಲ್ಲಿ ಮದ್ಯಾಹ್ನ 02-30 ರಿಂದ 03-30 ರ ವರಗೆ ಮಹಜರ್ ಮಾಡಿದರು, ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ಮಹಜರ್ ಈಗ ನೋಡುತ್ತಿದ್ದು ಅದು ಈಗಾಗಲೇ ನಿ.ಪಿ.- 1 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿ.ಪಿ.- 1(ಬಿ) ಎಂದು ಗುರುತಿಸಲಾಯಿತು. ಹಾಗೂ ಮಹಜರ್ ಮಾಡಿ ಸ್ಥಳದಲ್ಲಿ ಪೋಟೋಗಳನ್ನು ತೆಗೆದರು. ಈಗ ನೋಡುತ್ತಿರುವ ಪೋಟೋಗಳು ಆ ಸಮಯದಲ್ಲಿ ತೆಗೆದ ಪೋಟೋಗಳು ಇದ್ದು ಅವುಗಳನ್ನು ಈಗಾಗಲೇ ನಿ.ಪಿ.- 2 ರಿಂದ 7 ಎಂದು ಇದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಆ

ಪೋಟೋಗಳಲ್ಲಿ 1 ರಿಂದ 3 ನೇ ಆರೋಪಿತರು ಹಾಗೂ ಪತ್ರಾಂಕಿತ ಅಧಿಕಾರಿ, ಚಾಸಾ-1 ಮತ್ತು ಚಾಸಾ-3 ರವರು ಇದ್ದಾರೆ. ನಿ.ಪಿ.- 3 ರಲ್ಲಿ ಎಲೆಕ್ಟಾನಿಕ್ ತೂಕದ ಯಂತ್ರದಿಂದ ಚಾಸಾ-1 ರವರು ಗಾಂಜಾವನ್ನು ತೂಕ ಮಾಡುತ್ತಿರುವುದು ಕಂಡುಬರುತ್ತಿದೆ. ನಿ.ಪಿ.- 6 ಮತ್ತು 7 ರಲ್ಲಿ ಗಾಂಜಾ ಇರುವ ಪ್ಲಾಸ್ಟಿಕ್ ಕವರ್ ಗಳು ಕಂಡುಬರುತ್ತಿವೆ. ಆರೋಪಿಗಳು ದುಡ್ಡಿಗಾಗಿ ಗಾಂಜಾ ಮಾರುತ್ತಿರುವುದಾಗಿ ಹೇಳಿದರು.

3. ನಂತರ 1 ನೇ ಆರೋಪಿಯು ಕೃಷ್ಣ ನಾಯ್ಕರವರ ಮನೆಯ ಹಿಂಭಾಗದಲ್ಲಿ ಬೆಳೆದಿರುವ ಗಾಂಜಾ ಗಿಡಗಳಿಂದ ತೆಗೆದುಕೊಂಡು ಬರುತ್ತಿರುವುದಾಗಿ ತಿಳಿಸಿದರು. 1 ನೇ ಆರೋಪಿಯನ್ನು ಗಾಂಜಾ ಬೆಳೆದ ಸ್ಥಳ ತೋರಿಸಲು ಹೇಳಿದಾಗ ಅಲ್ಲಿಗೆ ಕರೆದುಕೊಂಡು ಹೋದರು. ಚಾಸಾ-1 ಮತ್ತು ಅವರ ಸಿಬ್ಬಂದಿಗಳು ಸೂರಗೊಂಡನ ಕೊಪ್ಪ ರಸ್ತೆಯ ಉಮ್ಮಿ ಬಾಯಿ ಕೋಂ ಈಶ್ವರ ನಾಯ್ಕರವರ ಮನೆ ಸರ್ವೆ ನಂಬರ್ 39/2 ರ ಜಾಗದಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಕರೆದುಕೊಂಡು ಹೋದಾಗ ಅಲ್ಲಿ ಗಾಂಜಾ ಗಿಡಗಳು ಕಂಡುಬಂದವು. ಸದರಿ ಗಾಂಜಾ ಗಿಡಗಳು ತೆಂಗಿನ ಗಿಡಗಳ ಬುಡದ ಹತ್ತಿರ 4 ಗಿಡಗಳು, ತೇಗದ ಮರದ ಹತ್ತಿರ 3 ಗಾಂಜಾ ಗಿಡಗಳು ಹಾಗೂ ನುಗ್ಗೆಕಾಯಿ ಮರದ ಹತ್ತಿರ 2 ಗಾಂಜಾ ಗಿಡಗಳು ಒಟ್ಟು 9 ಗಾಂಜಾ ಗಿಡಗಳು ಬೆಳೆದಿದ್ದವು. ಅದರ ವಾಸನೆಯನ್ನು ಗಮನಿಸಿದಾಗ ಗಾಂಜಾ ಎಂದು ಕಂಡುಬಂತು. ಅವು ಆಕಾರದಲ್ಲಿ ಗರಗಸದ ಎಲೆಗಳಂತೆ ಕಂಡುಬಂದವು. ಅವುಗಳನ್ನು ಸ್ಥಳದಲ್ಲಿ ಕಿತ್ತು ನಂತರ ಸ್ಥಳದಲ್ಲೇ ಕಾಂಡ ಮತ್ತು ಎಲೆಗಳನ್ನು ಬೇರ್ಪಡಿಸಿ ತೂಕ ಮಾಡಲಾಯಿತು. ಅವು ಒಟ್ಟು 05 ಕೆ ಜಿಪಿ 20 ಗ್ರಾಂ ಇತ್ತು. ಅವುಗಳನ್ನು ಸಂಜೆ 04-00 ರಿಂದ 05-00 ಗಂಟೆ ವರಗೆ ಮಹಜರ್ ಮಾಡಿ, ಪೋಟೋ ತೆಗೆಯಲಾಯಿತು. ಸದರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿ.ಪಿ.- 8 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.-8(ಬಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ ಪೋಟೋಗಳನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.- 9 ರಿಂದ 12 ಎಂದು ಗುರುತಿಸಲಾಗಿರುತ್ತದೆ. ಸದರಿ ಪೋಟೋಗಳಲ್ಲಿ ನಾನು, ಚಾಸಾ-3, ಚಾಸಾ- 1 ಮತ್ತು ತಹಶೀಲ್ದಾರ್ ಹಾಗೂ ಆರೋಪಿತರು ಕಾಣುತ್ತಾರೆ. ನಿ.ಪಿ.- 9 ಮತ್ತು 10 ಗಳಲ್ಲಿ ಗಾಂಜಾ ಗಿಡಗಳನ್ನು ತೂಕ ಮಾಡುತ್ತಿರುವುದು ಕಂಡು ಬರುತ್ತದೆ. ನಿ.ಪಿ.- 12 ರಲ್ಲಿ ತೆಂಗಿನ ಬುಡದಲ್ಲಿ ಗಾಂಜಾ ಗಿಡಗಳು ಬೆಳೆದಿರುವುದು ಕಂಡು ಬರುತ್ತದೆ. ಮಹಜರ್ ಮಾಡುವ ಸಮಯದಲ್ಲಿ ಗಾಂಜಾ ಗಿಡಗಳನ್ನು ತೂಕ ಮಾಡಿ ಅರಗು ಹಾಕಿ ಸೀಲ್ ಮಾಡಿದರು. ಸೀಲ್ ಮಾಡುವ ಪೂರ್ವದಲ್ಲಿ, ಸೊಪ್ಪು, ಬೀಜ ಮತ್ತು ಕಾಂಡವನ್ನು ಬೇರ್ಪಡಿಸಿದರು. ಬೇರೆ ಏನೂ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

4. ಗಾಂಜಾ ಗಿಡಗಳಿಂದ ತಲಾ 50 ಗ್ರಾಂ ನಂತೆ ಒಟ್ಟು 150 ಗ್ರಾಂ ಗಾಂಜಾವನ್ನು ಸ್ಯಾಂಪಲ್ ಗಾಗಿ ತೆಗೆಯಲಾಯಿತು. ಸದರಿ 3 ಮಾದರಿ ಸ್ಯಾಂಪಲ್ ಗಳನ್ನು ಈಗ ನೋಡುತ್ತಿದ್ದು ಸದರಿ ಮೂರು ಸ್ಯಾಂಪಲ್ ಮಾದರಿಗಳು ಈಗಾಗಲೇ ಎಂ.ಓ-1 ಎಂದು ಗರುತಿಸಲಾಗಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಹಸಿ ಗಾಂಜಾದಿಂದ ತೆಗೆದ ಸ್ಯಾಂಪಲನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಎಂ ಓ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ 1, 3 ಮತ್ತು 4 ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. (ಗೈರು ಹಾಜರು

ಇರುವ 2 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.)

**ಪಾಟೀ ಸವಾಲುಃ ಶ್ರೀ .MSMK, ವಕೀಲರಿಂದ 1 ರಿಂದ 4 ನೇ ಆರೋಪಿತರ ಪರವಾಗಿ**:

5. ನನ್ನ ಕೆಲಸದ ಅವದಿ ಬೆಳಿಗ್ಗೆ 10-00 ಸಂಜೆ 5-00 ಗಂಟೆ ವರಗೆ ಇರುತ್ತದೆ. ನನಗೆ ಫೀಲ್ಡ್ ವರ್ಕ್ ಇರುತ್ತದೆ ಆದ್ದರಿಂದ ನನಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದು ಇರುವುದಿಲ್ಲ. ನಾವು ಏನೇನು ಕೆಲಸ ಮಾಡುತ್ತೇವೆ ಎಂದು ದಿನಚರಿ ಪುಸ್ತದಲ್ಲಿ ಬರೆದು ಮೇಲಾದಿಕಾರಿಗಳಿಗೆ ಕೊಡುತ್ತೇವೆ. ದಿನಾಂಕಃ 27-07-2021 ರಂದು ದಿನಚರಿ ವರದಿಯನ್ನು ನನ್ನ ಮೇಲಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಸದರಿ ವರದಿಯನ್ನು ತನಿಖಾದಿಕಾರಿಗಳಿಗೆ ನೀಡಿಲ್ಲ. ನನ್ನ ಕೆಲಸ ಹೊರತುಪಡಿಸಿ ಬೇರೆ ಕೆಲಸಕ್ಕೆ ಹೊರಗೆ ಹೋಗಿದ್ದಲ್ಲಿ ನಮ್ಮ ಮೇಲಾಧಿಕಾರಿಗಳಿಗೆ ಹೇಳಿ ಹೋಗಬೇಕಾಡುತ್ತದೆ ಎಂದರ ನಿಜ. ದಿನಾಂಕಃ 27-07-2021 ರಂದು ನನ್ನ ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ನನ್ನ ಮೇಲಾದಿಕಾರಿಗೆ ಅರ್ಜಿ ಕೊಟ್ಟಿಲ್ಲ, ಸಾಕ್ಷಿ ಹೇಳುತ್ತಾರೇ ನಮ್ಮ ಮೇಲಾಧಿಕಾರಿಗಳೇ ನನಗೆ ಸಾಕ್ಷಿಗಾಗಿ ಹೋಗಲು ಹೇಳಿದರು. ತಹಶೀಲ್ದಾರ್ ರವರು ಮೌಖಿಕವಾಗಿ ನಮಗೆ ಸಾಕ್ಷಿಗಾಗಿ ಹೋಗಲು ಹೇಳಿದರು. ತಹಶೀಲ್ದಾರ್ ರವರು ಮೌಖಿಕವಾಗಿ ಹೇಳಿದ ಬಗ್ಗೆ ನನ್ನ ದಿನಚರಿ ಪುಸ್ತಕದಲ್ಲಿ ನಮೂದು ಮಾಡಿದ್ದೇನೆ. ನಾನು ಹೇಳಿದ ರೀತಿಯಲ್ಲಿ ನಾನು ಯಾವುದೇ ವರದಿಯನ್ನು ಮೇಲಾದಿಕಾರಿಗಳಿಗೆ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ದಿನಚರಿ ಪುಸ್ತಕವನ್ನು ತನಿಖಾದಿಕಾರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ದಿನಾಂಕಃ 27-07-2021 ರಂದು ತಹಶೀಲ್ದಾರ್ ರವರು ಮೌಖಿಕವಾಗಿ ತಿಳಿಸಿದಾಗ ನಾನು ನ್ಯಾಮತಿ ಕಚೇರಿಯಲ್ಲಿ ಇದ್ದೆ. ಆ ದಿನ ನಾನು ನ್ಯಾಮತಿ ಕಚೇರಿಯಲ್ಲಿ 10-30 ಗಂಟೆಯಲ್ಲಿ ಇದ್ದೆ. ನನ್ನ ವಾಸ ಸ್ಥಳ ಹರಿಹರ. ಪ್ರತಿದಿನ ನಾನು 08-30 ಕ್ಕೆ ಮನೆ ಬಿಟ್ಟು ನ್ಯಾಮತಿ ಕಚೇರಿ ತಲುಪುತ್ತೇನೆ. 10-30

ರಿಂದ 01-00 ಗಂಟೆ ವರಗೆ ನ್ಯಾಮತಿ ಕಚೇರಿಯಲ್ಲಿ ಇದ್ದೆ. ನ್ಯಾಮತಿ ಕಚೇರಿಯಿಂದ ನಾನು ನೇರವಾಗಿ ಪೋಲೀಸ್ ಜೀಪಿನಲ್ಲಿ ನ್ಯಾಮತಿ ಪೋಲೀಸ್ ಠಾಣೆಗೆ ಹೋದೆ. ಆಗ 01-00 ಗಂಟೆ ಆಗಿತ್ತು. ಆ ಜೀಪಿನಲ್ಲಿ ಡ್ರೈವರ್, ತಹಶೀಲ್ದಾರ್, ಚಾಸಾ-4 ಇದ್ದರು. ನ್ಯಾಮತಿ ಪೋಲೀಸ್ ಠಾಣೆ ಯಲ್ಲಿ ನಾನು 01-00 ರಿಂದ 01-30 ರ ವರಗೆ ಇದ್ದೆ. ಈಗ ನನಗೆ ತೋರಿಸಿದಾಗ ನಿ.ಪಿ.- 13 ನ್ನು ನನಗೆ ನೀಡಿದಾಗ ಆ ದಿನ ಮಧ್ಯಾಹ್ನ 01-15 ಗಂಟೆ ಆಗಿತ್ತು. ನಿ.ಪಿ.- 13 ರಲ್ಲಿ ಎಲ್ಲಿಗೆ ಬರಬೇಕು, ಎಷ್ಟು ಗಂಟೆಗೆ ಬರಬೇಕು ಅಂತ ನಮೂದು ಆಗಿಲ್ಲ ಎಂದರೆ ಸಮಯ ಬರೆದಿಲ್ಲ ಆದರೆ ಸ್ಥಳ ಬರೆದಿದೆ. ನಿ.ಪಿ.- 13 ನ್ನು ನನಗೆ ಕೊಟ್ಟಾಗ ನಿ.ಪಿ.- 13 ರಲ್ಲಿ ವಿಷಯವನ್ನು ನನ್ನ ಮುಂದೆ ಬರೆದು ನನಗೆ ಕೊಟ್ಟರು. ಅದನ್ನು ನನಗೆ ಚಾಸಾ-1 ರವರು ಕೊಟ್ಟರು. ನಿ.ಪಿ.- 13 ರಲ್ಲಿ ಪಂಚನಾಮೆಗೆ ನಾವು ಒಪ್ಪಿ ಹಾಜರಿದ್ದು ಸಹಿ ಮಾಡಿದ್ದೇವೆ ಅಂತ ಇದೆ. ಅದರ ಅರ್ಥ ನಾವು ಸ್ಥಳಕ್ಕೆ ಹೋಗಿ ಸಹಕಾರ ನೀಡುತ್ತೇವೆ. ಪಂಚನಾಮೆ ಬರೆದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ತೂಕದ ಯಂತ್ರ, ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ಗಳ ಕಂಪನಿ ಹೆಸರು ಎಂದು ನನಗೆ ನೆನಪಿಲ್ಲ.

7. ಜೋಗ ಬಸ್ ನಿಲ್ದಾಣ ಜನ ಜಂಗುಳಿಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ ಅದು ಹಳ್ಳಿ ಬಸ್ ಸ್ಟ್ಯಾಂಡ್. ಬಸ್ ಗಳು ಅಲ್ಲಿ ಓಡಾಡುತ್ತವೆ ಎಂದರೆ ಸರಿ. ವಾಹನಗಳಿಗೆ ಜನರು ಹತ್ತುವುದು ಇಳಿಯುವುದು ಮಾಡುತ್ತಾರೆ ಎಂದರೆ ನಿಜ. ನಮ್ಮ ಅಂಗ ಶೋಧನೆ ಮಾಡಿದಾಗ ನಮ್ಮಲ್ಲಿ ಏನೇನು ವಸ್ತುಗಳ ಇದ್ದವು ಅಂತ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಅದೇ ರೀತಿ ಚಾಸಾ- 1, ತಹಶೀಲ್ದಾರ್ ಮತ್ತು ಇತರೆ ಸಿಬ್ಬಂದಿಗಳು ಅಂಗ ಶೋದನೆ ಮಾಡಿದಾಗ ತಮ್ಮಲ್ಲಿ ಏನೇನೀ ವಸ್ತುಗಳು ಇದ್ದವು ಎಂದು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ನಾನು ಹೇಳಿದ ರೀತಿಯಲ್ಲಿ ಅ ಸ್ಥಳದಲ್ಲಿ ಹೋಗಿಲ್ಲ, ಅಂಗ ಶೋಧನೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಮಾತನ್ನು ಕೇಳಿ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಓಡೋದ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಧೀರಿಂದ ಅಂಗ ಶೋಧಂನೆ ಬೇಡ ಪತ್ರಾಂಕಿತ ಅಧಿಕಾರಿಯಿಂದ ಇರಲಿ ಅಂತ ಆರೋಪಿತರು ಹೇಳಿದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳ ದಲ್ಲಿ ಎಂ ಒ -1 ಮತ್ತು 2 ನ್ನು ವಶಪಡಿಸಿಕೊಂಡಾಗ ನಮ್ಮ ಸಹಿ ಪಡೆದಿಲ್ಲ. 1 ನೇ ಆರೋಪಿ ಕೃಷ್ಣ ನಾಯ್ಕರವರ ಮನೆಯಲ್ಲಿ ಬೆಳೆದ ಗಾಂಜಾ ತಂದು ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಯಾವುದೇ ಆರೋಪಿತರಿಂದ ವಶಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ಉಮ್ಲಿಬಾಯಿ ರವರ ಜಾಗದ ಬಗ್ಗೆ ದಾಖಲೆಯನ್ನು ಆ ಜಾಗದಲ್ಲಿ ಪರೀಶೀಲನೆ ಮಾಡಿದಿ ಬಗ್ಗೆ ಪಹಣಿ ದಾಖಲೆ ನೋಡಿದ್ದೇನೆ. ಪಹಣಿಯನ್ನು ಮೊಬೈಲಿನಲ್ಲಿ ನಾನು ನೋಡಿದೆನು. ಇಂತಹ ಆಪ್ ನಿಂದ ಜಮೀನಿನ ಪಹಣಿಯನ್ನು ಮೋಬೈಲಿನಲ್ಲಿ ನೋಡಿದ ಬಗ್ಗೆ ತನಿಖಾದಿಕಾರಿಗೆ ಹೇಳಿಲ್ಲ. ಕೃಷ್ಣ ನಾಯ್ಕು ಮತ್ತು ಉಮ್ಲಿಬಾಯಿ ರವರ ಮನೆಯ ಅಕ್ಕಪಕ್ಕದವರನ್ನು ವಿಚಾರಣೆ ಮಾಡಿಲ್ಲ. ಆರೋಪಿತರು ನನಗೆ 10 ವರ್ಷಗಳಿಂದ ಪರಿಚಯ ಇದೆ. ನಾನು ಗ್ರಾಮ ಆಡಳಿತಾದಿಕಾರಿಯಾಗಿರವುದರಿಂದ ಅವರ ಪರಿಚಯ ಇದೆ. ಸ್ಥಳದಲ್ಲಿ ನಾನು ಹೇಳಿದ ರೀತಿ ಯಾವುದೇ ಗಾಂಜಾ ತೂಕ ಮಾಡಿಲ್ಲ, ಜಮೀನಿಗೆ ನಾವು ಹೋಗಿಲ್ಲ,ಅಲ್ಲಿ ಯಾವುದೇ ಗಾಂಜಾ ಗಿಡಗಳು ಬೆಳೆದಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಗಾಂಜಾ ಸೊಪ್ಪು ಮತ್ತು ಎಲೆ ಗಳನ್ನು ಬೇರೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.- 2 ರಿಂದ 7 ಗಳಲ್ಲಿ ಹೊಸ ಜೋಗ ಬಸ್ ನಿಲ್ದಾಣ ಎಂದು ಬೋರ್ಡ್ ಕಾಣುತ್ತಿಲ್ಲ ಎಂದರೆ ನಿಜ, ಆದರೆ ಸ್ಥಳ ಅದೇ ಇರುತ್ತದೆ. ಪೋಲೀಸರು ನನ್ನ ಸಮಕ್ಷಮ ಆ ಎಲ್ಲಾ ಪೋಟೋಗಳನ್ನು ಸೃಷ್ಠಿಸಿದ್ದಾರೆ ಎಂದರೆ ಸುಳ್ಳು. ನನ್ನ ಸಮಕ್ಷಮ ಸ್ಯಾಂಪಲ್ ಗಾಗಿ 150 ಗ್ರಾಂ ಗಾಂಜಾ ತೆಗೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೀಟಿಗಳಿಗೆ ಸಹಿ ಮಾಡಿದೆನು ಎಂದು ಸುಳ್ಳು

ಹೇಳುತ್ತಿದೇನೆ ಎಂದರೆ ಸರಿಯಲ್ಲ. ಹೊಸ ಜೋಗ ಬಸ್ ನಿಲ್ದಾಣಕ್ಕೆ ನಾನು ಹೋಗಿಲ್ಲ, ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.